# ಶ್ರೀಕಾಂತ ಎನಗಿಷ್ಟು ದಯಮಾಡೊ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 533.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 309.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1.
5. **Note:** Singer has followed these lyrics.

ರಾಗ: ಕಾನಡ ತಾಳ: ಅಟ

ಶ್ರೀಕಾಂತ ಎನಗಿಷ್ಟು ದಯಮಾಡೊ ತಂದೆ
ಏಕಾಂತದಲಿ ನಿನ್ನ ಭಜಿಸುವ ಸೌಭಾಗ್ಯ || ಪ ||

ಧನದಾಸೆಗಾಗಿ ನಾ ಧನಿಕರ ಮನೆಗಳ
ಕೊನೆ ಬಾಗಿಲಲಿ ನಿಂದು ತೊಳಲಿ ಬಳಲಿದೆನೊ || 1 ||

ದೇಹಾಭಿಮಾನದಿಂದ ವಿಹಿತ ಧರ್ಮವ ತೊರೆದು
ಸ್ನೇಹಾನುಬದ್ಧನಾಗಿ ಸತಿ ಸುತರ ಪೊರೆದೆನೊ || 2 ||

ಏನಾದರೇನೆನ್ನ ಹೀನ ಗುಣಗಳನೆಲ್ಲ
ಮನ್ನಿಸಿ ಸಲಹೋ ಶ್ರೀ ಪುರಂದರ ವಿಠಲ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಇದರಲ್ಲಿ ದಾಸರು ಬಿಂಬೋಪಾಸನೆಗೆ ಅಗತ್ಯವಾದ ಮನಃಪ್ರಾವಣ್ಯವನ್ನು ಬೇಡಿಕೊಂಡಿದ್ದಾರೆ. ಬಹಿರ್ಮುಖ ಪ್ರವೃತ್ತಿಗಳಿಂದ ಕ್ರಮವಾಗಿ ಮಿಥ್ಯಾಜ್ಞಾನ, ಹರಿಯ ವಿಸ್ಮರಣೆ, ವಿಷಯೋಪಭೋಗ, ಸುಖ–ದುಃಖಾನುಭವ. ಇದನ್ನು ಲೋಕೈಷಣ ಎಂದು ಕರೆಯುತ್ತಾರೆ. ಇದರಲ್ಲಿ ವಿತ್ತೈಷಣ (ಮೊದಲ ನುಡಿ), ದಾರೈಷಣ, ಪುತ್ರೈಷಣ (ಎರಡನೆಯ ನುಡಿ)ಗಳೆಂಬ ಮೂರು ಪ್ರಕಾರಗಳು. ಅಂತರ್ಮುಖ ಪ್ರವೃತ್ತಿಯೇ ಸಾಧನೆಗೆ ಅನುಕೂಲದಾದುದು. ಬಿಂಬಾಪರೋಕ್ಷ ಜೀವನಿಗೆ ಮುಕ್ತಿ ಕಾರಣವಾದುದರಿಂದ, ಬಿಂಬವನ್ನು ತನ್ನ ಹೃದಯದಲ್ಲೇ ಸಾಕ್ಷಾತ್ಕರಿಸಿಕೊಳ್ಳಬೇಕು. ಇದಕ್ಕಾಗಿಯೇ ದಾಸರು 'ಏಕಾಂತದಲಿ ಭಜಿಸುವ ಭಾಗ್ಯ'ವನ್ನು ಬೇಡಿದ್ದಾರೆ.

**ವಿಹಿತ** = ಯೋಗ್ಯ

**Classification:** Keerthane
**Ankita:** Sri Purandara Vittala
**Location:** NA
**Category:** Bimba Roopa
**Sub-Category:** tande, daya, bhajane, Bhagya, rokka, mane, bagilu, deha, abhimana, dharma, patni, putra, maga,
**Pravachana:** NA
**Explanation:** NA